ರಾಜ್ಯದಲ್ಲಿ ಕಾಫಿ ತೋಟದಲ್ಲಿ ಕೆಲಸ ಮಾಡುವ ಮಹಿಳೆಯರಿಗಾಗಿ ಹೆರಿಗೆ ಭತ್ಯ ಕೊಡುವ ಬಗ್ಗೆ

೧೧೪೬. ಶ್ರೀ ಐ.ಬಿ. ಶಂಕರ್ (ಚಿಕ್ಕ ಮಂಗಳೂರು).— ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಾಫಿ ತೋಟದಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಹೆರಿಗೆ ಭತ್ಯ ಕೊಡುವ ಬಗ್ಗೆ (ನಿಯಿತ ಹೇರುವ) ಹಿಂದಿನ ಅಧಿವೇಶನದಲ್ಲಿ ಕೆಲವೇ ದಿನಗಳಲ್ಲಿ ತೀರ್ಮಾನ ಕೈಗೊಳ್ಳುವುದಾಗಿ ತಿಳಿಸಿದ್ದುದು ನಿಜವಲ್ಲವೇ ?

ಆ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು ?

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಮಂತ್ರಿಗಳು).—

ಅ) ರಾಜ್ಯ ಸರ್ಕಾರದ ಹೆರಿಗೆ ಭತ್ಯ ಯೋಜನೆಯ ಪ್ರಯೋಜನವನ್ನು ಕಾಫಿ ತೋಟದಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ವಿಸ್ತರಿಸಲು ಬರುವುದಿಲ್ಲ ಏಕೆಂದರೆ ಈ ಮಹಿಳೆಯರು ಪ್ಲಾಂಟೇಷನ್ ಲೇಬರ್ ಕಾಯಿದೆ (೧೯೫೧)ಗೆ ಅಡಿಯಲ್ಲಿ ಹೆರಿಗೆ ಭತ್ಯದ ಸೌಲಭ್ಯಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.

ಆ) ಕಾಫಿ ತೋಟದಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಎರಡೂ ಕಡೆಯಿಂದ ಹೆರಿಗೆಯ ಪ್ರಯೋಜನ ಕೊಡುವುದು ಉಚಿತವಲ್ಲವಾದ್ದರಿಂದ ಹೆಚ್ಚಿನ ಕ್ರಮವನ್ನು ತೆಗೆದುಕೊಳ್ಳುವ ಆವಶ್ಯಕತೆ ಇಲ್ಲ.

ಹೊಸ ದುರ್ಗದಲ್ಲಿ ಒಳಚರಂಡಿ ವ್ಯವಸ್ಥೆ ಬಗ್ಗೆ

೧೧೪೮. ಶ್ರೀ ಜಿ. ರಾಮದಾಸ್ (ಹೊಸದುರ್ಗ).— ಮಾನ್ಯ ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸದುರ್ಗ ಪಟ್ಟಣದಲ್ಲಿ ನೈರ್ಮಲ್ಯ ಸುಧಾರಿಸಲು ಒಳಚರಂಡಿ ವ್ಯವಸ್ಥೆ ಪುರಸಭೆಯಿಂದ ಜಾರಿಗೆ ತರಲು ಸಾಧ್ಯವೆ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಕ್ರಮವನ್ನೇನಾದರೂ ಕೈಗೊಳ್ಳಲಾಗಿದೆಯೆ ?

ಇ) ಹಾಗಿದ್ದಲ್ಲಿ ಇದರ ಅನುಷ್ಠಾನಕ್ಕೆ ಬೇಕಾಗುವ ಹಣವನ್ನು ಹೊಸದುರ್ಗ ಪುರಸಭೆಗೆ ಸರ್ಕಾರದವರು ನೀಡುವರೆ ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಹಾಗೂ ಕಾನೂನು ಮಂತ್ರಿಗಳು).—

ಅ) ಇಲ್ಲ.

ಆ) ಇಲ್ಲ.

ಇ) ಇಲ್ಲ.

ವಿರಾಜಪೇಟೆ ನ್ಯಾಯಾಲಯ ಕಟ್ಟಡದ ನಿರ್ಮಾಣದ ಬಗ್ಗೆ

೧೧೬೨. ಶ್ರೀ ಸುಮನಸಂತ (ವಿರಾಜಪೇಟೆ).— ಮಾನ್ಯ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿರಾಜಪೇಟೆ ನ್ಯಾಯಾಲಯ ಸಮುಚ್ಚಯ ಕಟ್ಟಡದ ನಿರ್ಮಾಣ ಕಾರ್ಯದಲ್ಲಿ ವಿಳಂಬ ಆಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಈ ಕಟ್ಟಡಕ್ಕೆ ನಿಗದಿ ಪಡಿಸಲಾದ ಹಣವೆಷ್ಟು ?